ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

---

ಸಂಖ್ಯೆ ಆಆಶಾ /ಶೂ ಖರೀದಿ/2015–16 ದಿನಾಂಕ: 29–12–2015

## ಸುತ್ತೋಲೆ

2015–16 ನೇ ಸಾಲಿನಲ್ಲಿ ರೂ 120 ಕೋಟಿ ಅಂದಾಜಿನಲ್ಲಿ ಶಿಕ್ಷಣ ಇಲಾಖೆಯು ನಡೆಸುತ್ತಿರುವ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಗಳಲ್ಲಿನ ಸುಮಾರು 48 ಲಕ್ಷ ವಿದ್ಯಾರ್ಥಿಗಳಿಗೆ ಒಂದು ಜೊತೆ ಷೂ ಮತ್ತು ಎರಡು ಜೊತೆ ಕಾಲು ಚೀಲಗಳನ್ನು ನೀಡಲು ರಾಜ್ಯ ಸರ್ಕಾರದ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದಕ್ಕೆ ಸಂಬಂದಿಸಿದಂತೆ ಶಾಲಾ ವಿದ್ಯಾರ್ಥಿಗಳಿಗೆ ಷೂ ಮತ್ತು ಕಾಲು ಚೀಲಗಳನ್ನು ಖರೀದಿಸಲು ಬೇಕಾದ ಮೊತ್ತವನ್ನು ಶಿಕ್ಷಣ ಆಯುಕ್ತರ ಕಛೇರಿಯ ಮೂಲಕ ನೇರವಾಗಿ ಶಾಲಾ ಎಸ್.ಡಿ.ಎಂ.ಸಿ ಖಾತೆಗೆ ಜಮೆ ಮಾಡಲು ಸರ್ಕಾರದ ಹಂತದಲ್ಲಿ ನಿರ್ಣಯಿಸಲಾಗಿದೆ.

ಮೇಲೆ ಹೇಳಲಾದ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿನ ವಿದ್ಯಾರ್ಥಿಗಳಿಗೆ ಒಂದು ಜೊತೆ ಷೂ ಹಾಗೂ ಎರಡು ಜೊತೆ ಕಾಲು ಚೀಲದ ಮೊತ್ತವನ್ನು NEFT(National Electronic Fund transfer)/RTGS(Real time gross settlement systems) ಮೂಲಕ ಆಯಾ ಶಾಲೆಗಳ ಎಸ್.ಡಿ.ಎಂ.ಸಿ ಬ್ಯಾಂಕ್ ಖಾತೆಗೆ ನೇರವಾಗಿ ಹಾಗೂ ಜರೂರಾಗಿ ಮುಂದಿನ 2–3 ದಿನಗಳಲ್ಲಿ ಜಮೆ ಮಾಡಲಾಗುವುದು. ಈ ಕೆಲಸ ಸಮರ್ಪಕವಾಗಿ ಜರುಗಲು ಜಿಲ್ಲಾ ಹಂತದಲ್ಲಿ ಮತ್ತು ಶೈಕ್ಷಣಿಕ ಬ್ಲಾಕ್ ಹಂತದಲ್ಲಿ ಈ ಕೆಳಗಿನಂತೆ ಕ್ರಮವಹಿಸಬೇಕು.

1. ಆಯಾ ಜಿಲ್ಲೆಯಲ್ಲಿನ ಬ್ಲಾಕ್‌ಗಳಲ್ಲಿರುವ ಶಾಲೆಗಳ ಮಾಹಿತಿಯನ್ನು ಹಾಗೂ ಆಯಾ ಶಾಲೆಗೆ ಪಾವತಿಸಬೇಕಾದ ಮೊತ್ತವನ್ನು EXCEL SHEET ನಲ್ಲಿ ನಮೂದಿಸಿ ಉಪನಿರ್ದೇಶಕರು(ಆಡಳಿತ) ಇ–ಮೇಲ್ ವಿಳಾಸಕ್ಕೆ ದಿನಾಂಕ: 30–12–2015ರಂದು ಶಿಕ್ಷಣ ಆಯುಕ್ತರ ಬೆಂಗಳೂರು ಕಛೇರಿಯಿಂದ ಕಳುಹಿಸಲಾಗುತ್ತದೆ.

2. ಈ EXCEL SHEET ನಲ್ಲಿರುವ ಕೆಳಕಾಣಿಸಿರುವ ಮಾಹಿತಿಗಳನ್ನು ಕಡ್ಡಾಯವಾಗಿ ಆಯಾ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ಪರಿಶೀಲಿಸಲೇಬೇಕು.

3. ಜಿಲ್ಲೆಯ ಹೆಸರು, ತಾಲ್ಲೂಕಿನ ಹೆಸರು, ಗ್ರಾಮದ ಹೆಸರು, ಶಾಲೆಯ ಹೆಸರು, ಶಾಲಾ ಡೈಸ್ ಸಂಕೇತ, ಶಾಲೆಯ ಎಸ್.ಡಿ.ಎಂ.ಸಿ ಬ್ಯಾಂಕ್ ಖಾತೆ ಸಂಖ್ಯೆ (11 ಅಥವಾ 12 ಅಂಕಿಗಳುಳ್ಳ ಖಾತೆ ಸಂಖ್ಯೆ), IFSC code. ಅನ್ನು ಪರಿಶೀಲಿಸಲೇಬೇಕು.

**4. ವಿದ್ಯಾರ್ಥಿಗಳ ಸಂಖ್ಯೆಯನ್ನು ಲೆಕ್ಕ ಹಾಕಿದ ನಂತರ ಶಾಲೆಗೆ ಬಿಡುಗಡೆ ಮಾಡಬೇಕಾದ ಮೊತ್ತ.**

| ಕ್ರ.ಸಂಖ್ಯೆ | ತರಗತಿ | ಪ್ರತಿ ವಿದ್ಯಾರ್ಥಿಗೆ ನಿಗಧಿಪಡಿಸಿರುವ ದರ | ಹಾಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಸರ್ಕಾರದಿಂದ ಭರಿಸಬೇಕಾದ ಮೊತ್ತ |
|---|---|---|---|---|
| 1 | 1 ರಿಂದ 5 ನೇ ತರಗತಿ | ರೂ. 225/- | | |
| 2 | 6 ರಿಂದ 8 ನೇ ತರಗತಿ | ರೂ. 250/- | | |
| 3 | 9 ರಿಂದ 10 ನೇ ತರಗತಿ | ರೂ. 275/- | | |
| ನಿಖರವಾಗಿ ಹಾಗೂ ಪರಿಶೀಲಿಸಿದ ದಾಖಲಾತಿಯನ್ವಯ ಬಿಡುಗಡೆ ಮಾಡಬೇಕಾದ ಒಟ್ಟು ಮೊತ್ತ: | | | | |

5. EXCEL SHEET ನಲ್ಲಿರುವ ಮಾಹಿತಿಯಲ್ಲಿ ತಪ್ಪುಗಳು ಕಂಡುಬಂದಲ್ಲಿ ಅದನ್ನು ತಿದ್ದುಪಡಿ ಮಾಡಿ ಅದೇ EXCEL SHEET ನಲ್ಲಿನ ಷರಾ ಕಾಲಂನಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.
6. ಈ ರೀತಿ ತಿದ್ದುಪಡಿ ಮಾಡಿದ EXCEL SHEET ಅನ್ನೇ ps2cpi@gmail.com ಮತ್ತು prydirector.edu.sgkar@kar.nic.in ಇ-ಮೇಲ್ ವಿಳಾಸಕ್ಕೆ ಕಳುಹಿಸಬೇಕು.
7. ಯಾವುದೇ ಕಾರಣಕ್ಕೂ ಮೇಲ್ಕಾಣಿಸಿದ ನಮೂನೆಯಲ್ಲಿ ಪ್ರತ್ಯೇಕವಾಗಿ ಮಾಹಿತಿಯನ್ನು ಸಲ್ಲಿಸಬಾರದು.
8. ಇ-ಮೇಲ್ ಮಾಡಿರುವ EXCEL SHEET ನಲ್ಲಿರುವ ಮಾಹಿತಿಗಳನ್ನು ಪರಿಶೀಲಿಸಲು ಉಪನಿರ್ದೇಶಕರ ಕಛೇರಿ ಮತ್ತು ಬಿ.ಇ.ಓ ಕಛೇರಿಗಳಲ್ಲಿರುವ ಕಂಪ್ಯೂಟರ್ ಪ್ರೋಗ್ರಾಮರ್‌ಗಳ ಸಹಾಯವನ್ನು ಪಡೆದುಕೊಳ್ಳಬೇಕು ಹಾಗೂ ಉಪನಿರ್ದೇಶಕರ ಕಛೇರಿಯಿಂದ ಕಳುಹಿಸಲಿರುವ ಮಾಹಿತಿಯಲ್ಲಿ ಯಾವುದೇ ಲೋಪದೋಷಗಳು ಇಲ್ಲದಂತೆ ಕ್ರಮ ವಹಿಸಲೇಬೇಕು.
9. ಇ-ಮೇಲ್ ಮೂಲಕ ಸಲ್ಲಿಸಲ್ಪಡುವ EXCEL SHEET ನಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳು ಸರಿ ಇದೆ ಎಂದು ಆಯಾ ಉಪನಿರ್ದೇಶಕರು(ಆಡಳಿತ) ಇವರೇ ಖುದ್ದಾಗಿ ಪರಿಶೀಲಿಸಿ ದೃಢೀಕರಿಸಬೇಕು.
10. **ಮೇಲೆ ಹೇಳಿದ ಮಾಹಿತಿಯಲ್ಲಿ ತಪ್ಪುಗಳು ಕಂಡು ಬಂದು ಹಣ ಬಿಡುಗಡೆ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾದಲ್ಲಿ ಆಯಾ ಉಪನಿರ್ದೇಶಕರೇ ನೇರ ಹೊಣೆಗಾರರಾಗುತ್ತಾರೆ.**
11. **ಈ ಕಾರ್ಯವನ್ನು ಆದ್ಯತೆಯ ಮೇಲೆ ಮಾಡಬೇಕೆಂತಲೂ ಸೂಚಿಸಲಾಗಿದೆ.**

29/12/15

(ಕೆ.ಎಸ್. ಸತ್ಯಮೂರ್ತಿ)
ಆಯುಕ್ತರು.

ಗೆ,

ರಾಜ್ಯದ ಎಲ್ಲಾ ಶೈಕ್ಷಣಿಕ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ